| 1 ನೇ ಅಪರ ಜಿಲ್ಲಾ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು |
|---|

ಎಸ್ ಸಿ 110/2022

| | | | | |
|---|---|---|---|---|
| ಸಾಕ್ಷಿದಾರರ ಹೆಸರು | ಃ | ಮಹದೇವಪ್ಪ | ಫ್ರಾಸಾ | 6 |
| ತಂದೆ ಹೆಸರು | ಃ | ನಿಂಗಯ್ಯ | ಚಾಸಾ | 9 |
| ವಯಸ್ಸು | ಃ | 46 ವರ್ಷ | ಸಾಕ್ಷಿಯು ಪ್ರಮಾಣ ಮಾಡಿದ ದಿ ಃ 01.07.2024 | |
| ವೃತ್ತಿ | ಃ | ವ್ಯವಸಾಯ | | |
| ವಾಸ ಸ್ಥಳ | ಃ | ಕಸುವಿನಹಳ್ಳಿ ಗ್ರಾಮ , ನಂಜನಗೂಡು ತಾಃ | | |

ಮುಖ್ಯ ವಿಚಾರಣೆ ಃ ಸರಕಾರಿ ಅಭಿಯೋಜಕರವರಿಂದ ಃ

1. ಚಾಸಾ 7 ಮತ್ತು 8 ರವರು ಗೊತ್ತು. ದಿಃ 15.12.2021 ರಂದು ದೇವಿಕಾಳನ್ನು ಆಕೆಯ ಗಂಡ ನೀರಿನಲ್ಲಿ ಮುಳುಗಿಸಿ ಸಾಯಿಸಿರುತ್ತಾನೆ ಅಂತ ವಿಚಾರ ಗೊತ್ತಾಗಿ ಅದನ್ನು ನೋಡಲು ನಾವು ಗ್ರಾಮದವರು ಆ ಸ್ಥಳಕ್ಕೆ ಹೋಗಿರುತ್ತೇವೆ. ಸ್ಥಳಕ್ಕೆ ಹೋಗಿ ನೋಡಲಾಗಿ ಮೃತ ದೇಹ ಇರಲಿಲ್ಲ. ಮೃತ ದೇಹವನ್ನು ಪೊಲೀಸರು ಮೈಸೂರಿನ ಮೆಡಿಕಲ್ ಕಾಲೇಜಿಗೆ ತಂದಿರುತ್ತಾರೆ ಎಂಬುದಾಗಿ ವಿಚಾರ ಗೊತ್ತಾಯಿತು. ನಂತರ ಮೈಸೂರಿನ ಮೆಡಿಕಲ್ ಕಾಲೇಜಿಗೆ ಬಂದಾಗ ಮೃತ ದೇಹವನ್ನು ಶವಾಗಾರದಲ್ಲಿ ಇರಿಸಲಾಗಿತ್ತು. ಆಗ ಪೊಲೀಸರು ನಮ್ಮ ಸಮಕ್ಷಮ ಶವ ಪಂಚನಾಮೆಯನ್ನು ಮಧ್ಯಾಹ್ನ 12.30 ರಿಂದ 3.30 ರವರೆಗೆ ಮಾಡಿರುತ್ತಾರೆ. ಆ ಪಂಚನಾಮೆಗೆ ನಾನು ಸೇರಿದಂತೆ ಚಾಸಾ 7, 8 ರವರು ಸಹಿ ಮಾಡಿದ್ದೇವೆ. ಶವ ಪಂಚನಾಮೆಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ 7 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ 7(ಎ) ಎಂದು ಗುರುತಿಸಲಾಯಿತು. ಶವ ಪಂಚನಾಮೆ ಮಾಡುವ ಕಾಲಕ್ಕೆ ಗ್ರಾಮಸ್ಥರು, ಪೊಲೀಸರು ಇದ್ದರು. ಶವ ಪಂಚನಾಮೆಯ ವಿಚಾರವನ್ನು ಓದಿಸಿ ತಿಳಿದುಕೊಂಡು ನಾನು ಸಹಿ ಮಾಡಿದ್ದೇನೆ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ ಃ**

2. ನಾನು ಮತ್ತು ಪಿರ್ಯಾದುದಾರರು ಸಂಬಂಧಿಕರಿರುತ್ತೇವೆ ಎಂದರೆ ಸರಿಯಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸಹ ಪೊಲೀಸರು ಹೇಳಿದ ಮೇರೆಗೆ ನಾನು ಶವ ಪಂಚನಾಮೆಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

**ಓ ಹೇ ಕೇ ಸ ಇ ಎ**

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ಮೈಸೂರು